# ರಾಮ ನಾಮ ಪಾಯಸಕ್ಕೆ ಕೃಷ್ಣ ನಾಮ ಸಕ್ಕರೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 500.
2. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru, page No. 45.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 312.
4. **Note:** Lyrics as in Ref. 1 are given without highlights. Lyrics in Ref. 2 are similar to Ref. 1 except few differences which are given in yellow highlights. The wordings in Ref. 3 are similar to Ref. 2, except few differences which are not considered here.
5. **Note:** Singer has followed lyrics as in Ref. 1.

ರಾಗ: ಶಂಕರಾಭರಣ ತಾಳ: ರೂಪಕ

ರಾಮ ನಾಮ ಪಾಯಸಕ್ಕೆ ಕೃಷ್ಣ ನಾಮ ಸಕ್ಕರೆ
ವಿಠಲ ನಾಮ ತುಪ್ಪವ ಕಲಸಿ ಬಾಯಿ ಚಪ್ಪರಿಸಿರೋ || p ||

ಒಮ್ಮನ ಗೋಧಿಯ ತಂದು ವೈರಾಗ್ಯ ಕಲ್ಲಲಿ ಬೀಸಿ
ಸುಮ್ಮನೆ ಸಜ್ಜಿಗೆಯ ತೆಗೆದು ಸಣ್ಣ ಶಾವಿಗೆಯ ಹೊಸೆದು || 1 ||

ಹೃದಯವೆಂಬೊ ಮಡಕೆಯಲ್ಲಿ ಭಾವವೆಂಬೊ ಎಸರನಿಟ್ಟು
ಬುದ್ಧಿಯಿಂದ ಪಾಕ ಮಾಡಿ ಹರಿವಾಣಕೆ ಬಡಿಸಿಕೊಂಡು || 2 ||
(ಹೃದಯವೆಂಬ ಪಾತ್ರೆಯೊಳಗೆ ಮನವೆಂಬ ಎಸರನಿಟ್ಟು
ಬುದ್ಧಿಯಿಂದ ಪಾಕ ಮಾಡಿ ಹರಿವಾಣ ತುಂಬಿರೋ)

ಆನಂದ ಆನಂದವೆಂಬೊ ಎರಡು ತೇಗು ಬಂದಾಗ
ಆನಂದ ಮೂರುತಿ ನಮ್ಮ ಪುರಂದರ ವಿಠಲನ ನೆನೆಯಿರೊ || 3 ||
(ಆನಂದ ಆನಂದವೆಂಬ ತೇಗು ಬಂದ ಪರಿಯಲಿ

ಆನಂದ ಮೂರುತಿ ನಮ್ಮ ಪುರಂದರ ವಿಠಲ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

- **ಒಮ್ಮನ** – ಒಂದು ಮನಸ್ಸು, ಏಕಾಗ್ರ ಚಿತ್ತ.
- **ಸುಮ್ಮನ** – ಒಳ್ಳೆಯ ಮನಸ್ಸು (ಸುಮನ).
- **ಭಾವ** – ಭಕ್ತಿ ಭಾವ.
- **ಬುದ್ಧಿಯಿಂದ** – ಮಾಹಾತ್ಮ್ಯ ಜ್ಞಾನದಿಂದ.
- **ಹರಿವಾಣದೊಳಗೆ** – ಪ್ರತಿಬಿಂಬವಾದ ಜೀವರ ಸ್ವರೂಪದಲ್ಲಿ.

**Classification:** Mundige
**Ankita:** purandara vittala
**Location:** NA
**Category:** Rama Stuti, Krishna Stuti
**Sub-Category:** rama, Krishna, sakkare, bayi, vairagya, hrudaya, buddi, Ananda, kallu,
**Pravachana:** NA
**Explanation:** Dr. Vijayendra Desai